ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 29–07–2019

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಸುಗಮ ಸಂಗೀತ ವಿಚಾರ ಸಂಕಿರಣ ಕಾರ್ಯಕ್ರಮ

ಉದ್ಘಾಟನೆ:

ಡಾ. ಹೆಚ್. ಎಸ್ ವೆಂಕಟೇಶಮೂರ್ತಿ,
ಹಿರಿಯ ಸಾಹಿತಿಗಳು, ಬೆಂಗಳೂರು

ಮುಖ್ಯ ಅತಿಥಿ:

ನಾಡೋಜ ಡಾ. ಬಿ.ಕೆ. ಸುಮಿತ್ರ,
ಹಿರಿಯ ಗಾಯಕರು, ಬೆಂಗಳೂರು

ಅಧ್ಯಕ್ಷತೆ:

ಫಯಾಜ್ ಖಾನ್
ಅಧ್ಯಕ್ಷರು,
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.

ದಿನಾಂಕ: 30–07–2019, ಮಂಗಳವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–2

2. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಸುಗಮ ಸಂಗೀತ ವಿಚಾರ ಸಂಕಿರಣ ಕಾರ್ಯಕ್ರಮ ಸಮಾರೋಪ ಸಮಾರಂಭ :

ಸಮಾರೋಪ ನುಡಿ:

ಬಿ.ಆರ್. ಲಕ್ಷ್ಮಣರಾವ್,
ಹಿರಿಯ ಕವಿಗಳು, ಬೆಂಗಳೂರು.

ದಿನಾಂಕ: 30–07–2019, ಮಂಗಳವಾರ ಸಮಯ: ಸಂಜೆ 5–00 ಗಂಟೆಗೆ

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–2

<u>ಪತ್ರಿಕಾ ಪ್ರಕಟಣೆ</u>

## ಮುಖ್ಯಮಂತ್ರಿ ಸಲಹೆಗಾರರಾಗಿ ಎಂ. ಲಕ್ಷ್ಮೀನಾರಾಯಣ ನೇಮಕ

ಬೆಂಗಳೂರು, ಜುಲೈ 29 ( ಕರ್ನಾಟಕ ವಾರ್ತೆ)

ಭಾರತೀಯ ಆಡಳಿತ ಸೇವೆಯ ನಿವೃತ್ತ ಅಧಿಕಾರಿ ಎಂ. ಲಕ್ಷ್ಮೀನಾರಾಯಣ ಅವರನ್ನು ಮುಖ್ಯಮಂತ್ರಿಯವರ ಸಲಹೆಗಾರರಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

## ಜನನ ಮತ್ತು ಮರಣ ದಾಖಲೆಗಳ ಮಾಹಿತಿಯನ್ನು ಶೀಘ್ರವೇ ಡಿಜಿಟಲೀಕರಣ : ಡಾ ಶಾಲಿನಿ ರಜನೀಶ್

ಬೆಂಗಳೂರು, ಜುಲೈ 29 ( ಕರ್ನಾಟಕ ವಾರ್ತೆ)

ಹೊಸದಾಗಿ ಇ–ಜನ್ಮ ತಂತ್ರಾಂಶ ಚಾಲನೆಗೆ ಬರುತ್ತಿದ್ದು ಜನನ ಮತ್ತು ಮರಣ ಹಾಗೂ ನಿರ್ಜೀವ ಜನನಗಳ ದಾಖಲೆಗಳನ್ನು ಡಿಜಿಟಲೈಸ್ ಮಾಡಲಾಗುವುದು ಎಂದು ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್ ಅವರು ತಿಳಿಸಿದರು.

ನಾಗರೀಕ ನೋಂದಣಿ ಪದ್ದತಿಯ 27 ನೇ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಜನನ ಮರಣ ನೋಂದಣಿ ಅಧಿನಿಯಮ – 1969 ಮತ್ತು ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳು 1999 ರ ಅನ್ವಯ ದಿನಾಂಕ : 01–04–2015 ರ ಹಿಂದಿನ ಅವಧಿ ಜನನ, ಮರಣ ಮತ್ತು ನಿರ್ಜೀವ ಜನನ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ಅದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುಮೋದನೆ ಕೋರಲಾಗಿದ್ದು, ಜನನ ಅಥವಾ ಮರಣ ಸಂಭವಿಸಿದ ಒಂದು ವರ್ಷದೊಳಗೆ ನೊಂದಾಯಸಲ್ಪಡದ ಘಟನೆಗೆ ಹತ್ತು ರೂಪಾಯಿಯ ತಡ ಶುಲ್ಕದೊಂದಿಗೆ ನೊಂದಾಯಸಬಹುದಾಗಿದೆ. ಇ–ಜನ್ಮ ನೋಂದಣೆಗಾಗಿ ಕ್ರಮ ಕೈಗೊಂಡಿದ್ದು, ನೋಂದಣಾಧಿಕಾರಿ / ಉಪ ನೊಂದಣಾಧಿಕಾರಿಗಳ ಡಿಜಿಟಲ್ ಸಹಿ ಒದಗಿಸಿದ ಕೂಡಲೆ ಇದು ಜಾರಿಗೆ ಬರುತ್ತದೆ ಎಂದರು.

ರಾಜ್ಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಗ್ರಾಮಾಂತರ, ಸ್ಥಳೀಯ ಹಾಗೂ ನಗರ ಸಂಸ್ಥೆಗಳಲ್ಲಿ ವಿವಿದ ಹಂತದಲ್ಲಿ ಡಿಜಿಟಲ್ ಹಾಗೂ ಮ್ಯಾನ್ಯುಯಲ್ ಸಹಿಯೊಂದಿಗೆ ಜನನ / ಮರಣ ಪ್ರಮಾಣ ಪತ್ರಗಳನ್ನು ನೀಡುವ ವ್ಯವಸ್ಥೆ ಇದ್ದು, ಏಕರೂಪ ಪದ್ದತಿಯನ್ನು ದಿನಾಂಕ : 02–07–2018 ರಿಂದ ಅಳವಡಿಸಿ ಜಾರಿಗೊಳಿಸಲಾಗುತ್ತಿದೆ.

ಸ್ಥಳೀಯ ಸಂಸ್ಥೆಗಳ 338 ಹಾಗೂ ಬಿಬಿಎಂಪಿ ವ್ಯಾಪ್ತಿಯ 69 ಒಟ್ಟು 407 ಜನನ ಮರಣ ನೋಂದಣಿ ಕೇಂದ್ರಗಳನ್ನು ಇ–ಜನ್ಮ ತಂತ್ರಾಂಶಕ್ಕೆ ದಿನಾಂಕ : 01–04–2018 ರಿಂದ ವರ್ಗಾಯಿಸಿ ಸಾರ್ವಜನಿಕರಿಂದ ಸ್ವೀಕರಿಸಲಾಗುವ ದೂರು ಮತ್ತು ಸ್ಪಷ್ಟೀಕರಣಗಳಿಗೆ ಮಾಹಿತಿ ಮಾರ್ಗದರ್ಶನಗಳನ್ನು ನೀಡಲಾಗುವುದು ಎಂದರು. ನಿಯಮಾನುಸಾರ ಜನನ ಮರಣ ನೋಂದಣಿ ಸೇವಾ ಸಿಂಧು ಕೇಂದ್ರಗಳಲ್ಲಿ 5–00 ರೂ. ಗಳಿಗೆ ಜನನ ಮರಣ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ ಎಂದರು.

ಪ್ರಸ್ತುತ ಆಸ್ಪತ್ರೆಯಿಂದ ಲಭ್ಯವಿರುವ ಮಾಹಿತಿಯಂತೆ ಪ್ರತಿ ತಿಂಗಳು ಸರಾಸರಿ ಐದು ಮಕ್ಕಳ ಜನನವಾಗುತ್ತಿರುವ ಮಾಹಿತಿ ಲಭ್ಯವಿದ್ದು, ಪ್ರತಿಯೊಂದು ಮಕ್ಕಳ ಹುಟ್ಟು, ಭ್ರೂಣ ಹತ್ಯೆ, ತ್ಯಜಿಸಲ್ಪಡುವ ಮಕ್ಕಳು, ಮನೆಯಲ್ಲಿ ಹುಟ್ಟುವ ಮತ್ತು ಸಾಯುವ ಮಕ್ಕಳು, ಪೊಲೀಸ್ ಇಲಾಖೆಯಿಂದ ಗುರುತಿಸಲ್ಪಡುವ ಮಕ್ಕಳು ಹೀಗೆ ದಾಖಲೆಗಳಿಗೆ ಸಿಗದ ಅನಧಿಕೃತ ಮಕ್ಕಳ ಮತ್ತು ಹಿರಿಯ ನಾಗರೀಕರ, ಮಂಗಳಮುಖಿಯರ ವಿವರಗಳನ್ನು ಇತರ ಇಲಾಖೆಗಳ ಮತ್ತು ಬಿಬಿಎಂಪಿ ಮತ್ತಿತರೆಡೆಯಿಂದ ಸಂಗ್ರಹಿಸಿ ನಿಖರ ಹಾಗೂ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಿ ಆನ್‌ಲೈನ್ ನಲ್ಲಿ ಎಲ್ಲಾ ವಿವರಗಳು ಲಭ್ಯವಿರುವಂತೆ ಇಡಲು ಅಧಿಕಾರಿಗಳಿಗೆ ಸೂಚಿಸಿದರು.

# <u>ಅರ್ಜಿ ಆಹ್ವಾನ</u>

ಬೆಂಗಳೂರು, ಜುಲೈ 29 ( ಕರ್ನಾಟಕ ವಾರ್ತೆ)

ರಾಷ್ಟ್ರೀಯ ಪತ್ರಾಗಾರ, ನವದಹಲಿ ಇವರು 2019-20 ನೇ ಸಾಲಿಗೆ ಕೇಂದ್ರ ಹಣಕಾಸು ನೆರವಿನ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿನ ಐತಿಹಾಸಿಕ ದಾಖಲೆಗಳ ಸಂರಕ್ಷಣೆ, ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ಐತಿಹಾಸಿಕ ನಕಾಶೆಗಳು, ಅಮೂಲ್ಯ ಐತಿಹಾಸಿಕ ದಾಖಲೆಗಳು, ಪತ್ರಾಗಾರಕ್ಕೆ ಯೋಗ್ಯವಾದ ಛಾಯಚಿತ್ರಗಳ ಮುದ್ರಣಗಳನ್ನು ಜೋಪಾನಪಡಿಸುವಿಕೆ/ವೈಜ್ಞಾನಿಕ ಸಂರಕ್ಷಿಸುವಿಕೆ, ದುರಸ್ತಿ, ಪ್ರಕಟಣೆ, ಪಟ್ಟಿ ಮಾಡುವಿಕೆ ಕಾರ್ಯ ಹಾಗೂ ಕಂಪ್ಯೂಟರ್/ಸ್ಕ್ಯಾನರ್ ಇತ್ಯಾದಿ ಪರಿಕರಗಳ ಖರೀದಿ ದಾಖಲೆಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಸರ್ಕಾರಿ ಹಾಗೂ ನೊಂದಾಯಿತ ಸ್ವಯಂ ಸಂಘ/ಸಂಸ್ಥೆಗಳು, ವ್ಯಕ್ತಿಗಳು ವಿಶ್ವವಿದ್ಯಾಲಯಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಯೋಜನೆಯಡಿ ವಿಸ್ತರಿಬಹುದಾದ ಹಣಕಾಸು ನೆರವಿನ ಗರಿಷ್ಠ ಮಿತಿಯು ರೂ 10.00 ಲಕ್ಷ (ಹತ್ತು ಲಕ್ಷ ರೂ ಮಾತ್ರ) ವಾಗಿರುತ್ತದೆ ಮತ್ತು ಯೋಜನೆಯು ಒಟ್ಟು ವೆಚ್ಚದ 75.25 ಅನುಪಾತದಲ್ಲಿರುತ್ತದೆ. (ಅಂದರೆ ಕೇಂದ್ರ ಸರ್ಕಾರದ ಪಾಲು 75% ರಷ್ಟು ಮತ್ತು ಸಂಘ/ಸಂಸ್ಥೆಗಳ ಪಾಲು 25ರಷ್ಟು)

ಆಸಕ್ತರು ನಿಗದಿತ ಅರ್ಜಿ ನಮೂನೆ ಹಾಗೂ ವಿವರಗಳಿಗೆ ರಾಷ್ಟ್ರೀಯ ಪತ್ರಾಗಾರ, ನವದಹಲಿಯ ಅಂತರ್ಜಾಲ **www.nationalarchives.nic.in Section Grants-in-aid on home page** ಹಾಗೂ **www.kannadasiri.kar.nic.in** ನಿಂದ ಪಡೆದು ಭರ್ತಿಮಾಡಿ ಸಲ್ಲಿಸುವುದು.

ರಾಜ್ಯ ಮಟ್ಟದ ಶೋಧಕ ಸಮಿತಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಆಯ್ಕೆ ಪಟ್ಟಿಯನ್ನು ಛೇರ್ಮನ್, ಗ್ರಾಂಟ್ಸ್ ಕಮಿತಿ ಮತ್ತು ಡೈರಕ್ಟರ್ ಜನರಲ್ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ, ಜನಪತ್ , ನವದೆಹಲಿ-110 001 ಇವರಿಗೆ ಕಳುಹಿಸಲಾಗುವುದು.

ನಿಗದಿತ ನಮೂನೆಯಲ್ಲಿರುವ ಅರ್ಜಿಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮೊದಲನೆ ಮಹಡಿ, ಕೊಠಡಿ ಸಂ: 126, ವಿಕಾಸಸೌಧ, ಬೆಂಗಳೂರು – 560 001 ಇವರಿಗೆ ಆಗಸ್ಟ್ 28 ರೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.